**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ. 325/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಎಲ್. ಮಹೇಂದ್ರನಾಥ್ |
| ತಂದೆಯ ಹೆಸರು | : | ಲಿಂಗಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಮೈಸೂರು. |

**ಸಾಕ್ಷಿಯನ್ನು ದಿನಾಂಕಃ 03.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ. ಜೆ.ಎಸ್.ಆರ್. ವಕೀಲರಿಂದಃ**

ನನ್ನ ಹಾಗು ಪಿರ್ಯಾದಿಯ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರುವುದಿಲ್ಲ ಹಾಗು ನಾನು ಪಿರ್ಯಾದಿಯಿಂದ ಪಿರ್ಯಾದಿನಲ್ಲಿ ತಿಳಿಸಿರುವಂತೆ ಯಾವುದೇ ಸಾಲ ಪಡೆದಿರುವುದಿಲ್ಲ. 2019 ನೇ ಇಸವಿಯ ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ನನ್ನ ಅಣ್ಣನಾದ ಎಲ್. ತಾಂಡವಮೂರ್ತಿಯವರಿಗೆ ಅವರ ಮಕ್ಕಳ ವಿದ್ಯಾಭ್ಯಾಸ ಹಾಗು ವ್ಯವಸಾಯದ ಸಂಬಂಧ ರೂ. 5,00,000/- ಸಾಲದ ಅವಶ್ಯಕತೆ ಇದೆ ಎಂದು ನನ್ನಲ್ಲಿ ತಿಳಿಸಿರುತ್ತಾರೆ. ಆ ಸಂಬಂಧ ನಾನು ನಮ್ಮ ಊರಿನಲ್ಲಿ ನಮ್ಮ ಊರಿನಲ್ಲಿ ಬಡ್ಡಿ ವ್ಯವಹಾರ ನಡೆಸುತ್ತಿದ್ದ ಪಿರ್ಯಾದಿಯ ತಂದೆಯಾದ ಸಿದ್ದರಾಮೇಗೌಡರವರ ಬಳಿ ಹೋಗಿ ನನ್ನ ಅಣ್ಣನಾದ ಎಲ್. ತಾಂಡವಮೂರ್ತಿರವರಿಗೆ ಸಾಲದ ಅವಶ್ಯಕತೆ ಇರುವುದನ್ನು ತಿಳಿಸಿರುತ್ತೇನೆ. ಆಗ ಅವರು 15 ದಿನದ ಕಾಲಾವಕಾಶ ಬೇಕೆಂದು ತಿಳಿಸಿದ್ದು ಅದಕ್ಕೆ ನಾವು ಒಪ್ಪಿ ಬಂದಿರುತ್ತೇವೆ. ನಂತರ 15 ದಿನಗಳನ್ನು ಕಳೆದು ಮತ್ತೆ ಅವರನ್ನು ಭೇಟಿಯಾಗಿದ್ದು ಆಗ ಸದರಿ ಸಿದ್ದರಾಮೇಗೌಡರು

ತನ್ನಲ್ಲಿ ಅಷ್ಟೊಂದು ಹಣ ಇರುವುದಿಲ್ಲ, ತನ್ನ ಹಿರಿಯ ಮಗನಾದ ಎನ್.ಎಸ್. ರಾಮು ಅವರಲ್ಲಿ ರೂ. 5,00,000/- ಸಾಲವನ್ನು ಕೊಡಿಸುವುದಾಗಿ ಒಪ್ಪಿಕೊಂಡು ಸದರಿ ಸಾಲದ ಭದ್ರತೆಗಾಗಿ 01 ಖಾಲಿ ಸ್ಟಾಂಪ್ ಪೇಪರ್ ಹಾಗು ನನ್ನ ಬಳಿ 01 ಖಾಲಿ ಚೆಕ್ ಅನ್ನು ನೀಡುವಂತೆ ತಿಳಿಸಿರುತ್ತಾರೆ. ನಂತರ ದಿನಾಂಕಃ 17.06.2019 ರಂದು ಸಿದ್ದರಾಮೇಗೌಡರವರು ನನ್ನಲ್ಲಿ ಹಾಗು ನನ್ನ ಅಣ್ಣನಾದ ತಾಂಡವಮೂರ್ತಿರವರಲ್ಲಿ ಹೆಚ್.ಡಿ. ಕೋಟೆಯ ಉಪ-ನೋಂದಣಾಧಿಕಾರಿಯವರ ಕಛೇರಿಗೆ ಬರುವಂತೆ ತಿಳಿಸಿದ್ದು ಆ ಪ್ರಕಾರ ನಾವು ಅಲ್ಲಿಗೆ ಹೋಗಿರುತ್ತೇವೆ. ಆಗ ಅವರು ರೂ. 5,00,000/- ಸಾಲದ ಹಣ ಇರುವುದಾಗಿ ತಿಳಿಸಿ ಸದರಿ ಖಾಲಿ ಛಾಪಾ ಕಾಗದ ಹಾಗು ನನ್ನ ಖಾಲಿ ಚೆಕ್ ನ ಜೊತೆಗೆ ನನ್ನ ಅಣ್ಣನ ಹೆಸರಿನಲ್ಲಿದ್ದ ನಾಯಕನಹುಂಡಿ ಗ್ರಾಮದ ಸ.ನಂ. 98/2 ರ ಆಸ್ತಿಗೆ ಸಂಬಂಧಿಸಿದಂತೆ ಅವರ ಮಗನಾದ ರಾಮು ಹೆಸರಿಗೆ ಕ್ರಯ ಒಪ್ಪಂದ ಕರಾರು ಪತ್ರವನ್ನು ಬರೆದುಕೊಡುವಂತೆ ತಿಳಿಸಿರುತ್ತಾರೆ. ಆಗ ನಾವು ನೀವು ನಮ್ಮಲ್ಲಿ ಅಡಮಾನ ಪತ್ರ ಬರೆದುಕೊಡುವಂತೆ ತಿಳಿಸಿದ್ದು ಈಗ ಕ್ರಯ ಒಪ್ಪಂದ ಪತ್ರ ಬರೆದುಕೊಡುವಂತೆ ಕೇಳುತ್ತಿದ್ದೀರಲ್ಲಾ ಎಂದು ಕೇಳಿದಾಗ ಅವರು ಸದರಿ ಅಡಮಾನ ಪತ್ರಕ್ಕೆ ಸ್ಟಾಂಪ್ ತುಂಬಾ ಜಾಸ್ತಿಯಾಗುತ್ತದೆ, ನೀವು ಸಾಲದ ಹಣವನ್ನು ಹಿಂತಿರುಗಿಸಿದ ನಂತರ ತಾನು ಅವುಗಳನ್ನು ಹಿಂತಿರುಗಿಸುವುದಾಗಿ ತಿಳಿಸಿರುತ್ತಾರೆ. ನಂತರ ನಾವು ಅದಕ್ಕೆ ಒಪ್ಪಿಕೊಂಡು ಸದರಿ ಸಾಲದ ಭದ್ರತೆಗಾಗಿ ನನ್ನ ಅಣ್ಣನಾದ ತಾಂಡಮೂರ್ತಿರವರ ಹೆಸರಿನಲ್ಲಿದ್ದ ನಾಯಕನಹುಂಡಿ ಗ್ರಾಮದ ಸ.ನಂ. 98/2 ರ 03 ಎಕರೆ 09 ಗುಂಟೆ ಜಮೀನಿನ ಪೈಕಿ 02 ಎಕರೆ ಜಮೀನಿಗೆ ಸಂಬಂಧಿಸಿದಂತೆ ನನ್ನ ಅಣ್ಣನು ಸದರಿ ಸಿದ್ದರಾಮೇಗೌಡರ ಹಿರಿಯ ಮಗನಾದ ಎನ್.ಎಸ್. ರಾಮುರವರ ಹೆಸರಿಗೆ ಕ್ರಯ ಒಪ್ಪಂದ ಕರಾರು ಪತ್ರವನ್ನು ಬರೆದು ನೋಂದಾವಣೆ ಮಾಡಿ ಕೊಟ್ಟಿರುತ್ತಾರೆ. ಅದೇ ದಿನ ಸಿದ್ದರಾಮೇಗೌಡರವರು ಅವರ ಮಗನಾದ ರಾಮುರವರಿಂದ ರೂ. 5,00,000/- ಸಾಲವನ್ನು ನನ್ನ ಅಣ್ಣನಿಗೆ ಕೊಟ್ಟಿರುತ್ತಾರೆ. ನಂತರ ನನ್ನ ಅಣ್ಣನಾದ

ತಾಂಡವಮೂರ್ತಿರವರು ಸದರಿ ಅಸಲು ಹಾಗು ಬಡ್ಡಿ ಹಣವನ್ನು ಒಟ್ಟು ಮಾಡಿಕೊಂಡು ಸದರಿ ಸಿದ್ದರಾಮೇಗೌಡರವರ ಬಳಿಗೆ ಹೋಗಿ ಸದರಿ ಸಾಲದ ಹಣ ಹಾಗು ಬಡ್ಡಿಯನ್ನು ಪಡೆದುಕೊಂಡು ನಮ್ಮಿಂದ ಭದ್ರತೆಗಾಗಿ ಪಡೆದುಕೊಂಡ ಖಾಲಿ ಸ್ಟಾಂಪ್ ಪೇಪರ್ ಹಾಗು ನನ್ನ ಖಾಲಿ ಚೆಕ್ ಅನ್ನು ಹಿಂತಿರುಗಿಸುವಂತೆ ಹಾಗು ನನ್ನ ಅಣ್ಣನಿಂದ ಬರೆಸಿಕೊಂಡ ಕ್ರಯ ಒಪ್ಪಂದ ಕರಾರು ಪತ್ರವನ್ನು ರದ್ದು ಮಾಡುವಂತೆ ಕೇಳಿಕೊಂಡಿರುತ್ತೇನೆ. ಆದರೆ ಅವರು ಅದಕ್ಕೆ ಒಪ್ಪಿಕೊಳ್ಳದೇ ನನ್ನ ಅಣ್ಣನಾದ ತಾಂಡವಮೂರ್ತಿಯವರು ಸಾಲದ ಭದ್ರತೆಗಾಗಿ ಬರೆದುಕೊಟ್ಟ ಕ್ರಯ ಒಪ್ಪಂದ ಕರಾರು ಪತ್ರವನ್ನು ದುರ್ಬಳಕೆ ಮಾಡಿಕೊಂಡು ಅದರ ಮೇಲೆ ಹೆಚ್.ಡಿ. ಕೋಟೆಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಕ್ರಯ ಪತ್ರ ಬರೆದುಕೊಡುವಂತೆ ಅಸಲು ದಾವೆ ಸಲ್ಲಿಸಿರುತ್ತಾರೆ. ಅಲ್ಲದೇ ನನ್ನಿಂದ ಭದ್ರತೆಗಾಗಿ ಪಡೆದ ಖಾಲಿ ಚೆಕ್ ಅನ್ನು ದುರ್ಬಳಕೆ ಮಾಡಿಕೊಂಡು ಸಿದ್ದರಾಮೇಗೌಡರ ಕಿರಿಯ ಮಗನಾದ ಪಿರ್ಯಾದಿಯ ಮೂಲಕ ಈ ಸುಳ್ಳು ಪ್ರಕರಣವನ್ನು ಹೂಡಿರುತ್ತಾರೆ. ಸದರಿ ಮೇಲೆ ಹೇಳಿದ ಅಸಲು ದಾವೆ ಹೂಡುವ ಮೊದಲು ರಾಮುರವರು ನನ್ನ ಅಣ್ಣನಾದ ತಾಂಡವಮೂರ್ತಿಯವರಿಗೆ ವಕೀಲರ ಮೂಲಕ ನೋಟೀಸ್ ಅನ್ನು ಕಳುಹಿಸಿದ್ದು ಸದರಿ ನೋಟೀಸ್ ಗೆ ನಾವು ಉತ್ತರವನ್ನು ಕೊಟ್ಟಿದ್ದು ಸದರಿ ಉತ್ತರದಲ್ಲಿ ಈ ಎಲ್ಲಾ ವಿಚಾರಗಳನ್ನು ತಿಳಿಸಿರುತ್ತೇನೆ. ನಾನು ಮೇಲೆ ಹೇಳಿದಂತೆ ಪಿರ್ಯಾದಿಗೆ ಚೆಕ್ ನಲ್ಲಿ ತಿಳಿಸಿರುವಂತೆ ಯಾವುದೇ ಸಾಲದ ಹಣವನ್ನು ಕೊಡಲು ಭಾಧ್ಯಸ್ಥನಾಗಿರುವುದಿಲ್ಲ.

**ಈ ಹಂತದಲ್ಲಿ ಆರೋಪಿ ಪರ ವಕೀಲರು ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿಜೆ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**